# ಆತ್ಮದ ಮಾತು: ನಾನು ಹುಡುಗಿ, ಭಾಗ್ಯವಂತೆ

ಕೋಡಿಬೆಟ್ಟು ರಾಜಲಕ್ಷ್ಮಿ

ಮಧುರೈ ಬಳಿಯ ಸಣ್ಣಹಳ್ಳಿ ಅಣುಪ್ಪಾನಡಿ ಎಂಬಲ್ಲಿ ಹುಟ್ಟಿದ ನಟರಾಜ್ ಎಂಬ ಹುಡುಗನಿಗೆ ತಾನು ಹುಡುಗಿ ಎಂದು ಅರಿವಾಗುವ ವೇಳೆಗೆ ಮನೆಯವರೆಲ್ಲರೂ ತಿರಸ್ಕರಿಸಿಯಾಗಿತ್ತು. ಆ ಊರಿಗೆ ಬಂದ ಟೂರಿಂಗ್ ಟಾಕೀಸ್‌ನಲ್ಲಿ ಪ್ರದರ್ಶನವಾಗುತ್ತಿದ್ದ ಸಿನಿಮಾಗಳಲ್ಲಿನ ನೃತ್ಯಗಳನ್ನು ನೋಡಿದಾಗಲೇ ತನ್ನೊಳಗೂ ನೃತ್ಯಪಟು ಇರುವುದು ಅರಿವಿಗೆ ಬಂದಿತ್ತು. ಅಂತರಂಗದಲ್ಲಿ ಲಿಂಗತ್ವದ ಅಸ್ತಿತ್ವದ ಹುಡುಕಾಟ, ಬಹಿರಂಗದಲ್ಲಿ ನೃತ್ಯ ಕಲಿಕೆಗಾಗಿ ಗುರುಗಳ ಹುಡುಕಾಟ ನಡೆಸುತ್ತಿದ್ದ ನಟರಾಜ್‌ಗೆ ಪ್ರಸಿದ್ಧ ತಂಜಾವೂರು ಸೋದರರ ವಂಶಜರಾದ ಗುರು ಕೆ. ಪಿ. ಕಿಟ್ಟಪ್ಪ ಪಿಳ್ಳೈ ಅವರು ಗುರುವಾಗಿ ಒದಗಿ ಬಂದರು. ಅವರ ಮನೆಯಲ್ಲಿಯೇ ದೀರ್ಘ 15 ವರ್ಷಗಳ ಕಾಲ ನೃತ್ಯ ಮತ್ತು ಜೀವನ ಸಂಸ್ಕಾರಗಳನ್ನು ಕಲಿಯುವಷ್ಟರಲ್ಲಿ ಅವರು 'ನರ್ತಕಿ ನಟರಾಜ್' ಎಂಬ ನೃತ್ಯಪಟುವಾಗಿ ಹೊರಹೊಮ್ಮಿದ್ದರು. ನೃತ್ಯದ ಜೊತೆಗೆ ಸಾಹಿತ್ಯದ ಓದು ಅವರ ಮತ್ತೊಂದು ಆಸಕ್ತಿ. ಅವರ ಸಾಧನೆಯ ಪಥದಲ್ಲಿ ಗೋಚರವಾದ ಏಳುಬೀಳುಗಳು ನೂರಾರು. ಅವುಗಳನ್ನು ದಾಟಿ ಬಂದ ಅವರ ಜೀವನಕಥೆಯು ತಮಿಳುನಾಡು ರಾಜ್ಯದ 11 ನೇ ತರಗತಿಯ ಪಠ್ಯಪುಸ್ತಕದಲ್ಲಿ ಪಾಠವಾಗಿದೆ. ಜಗತ್ತಿನ ವಿವಿಧ ದೇಶಗಳ ವೇದಿಕೆಗಳಲ್ಲಿ ಅವರು ನೃತ್ಯ ಪ್ರಸ್ತುತಪಡಿಸಿದ್ದಾರೆ. ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ. ತಮಿಳುನಾಡು ರಾಜ್ಯ ಅಭಿವೃದ್ಧಿ ಸಮಿತಿಯ ಪ್ರಥಮ ಟ್ರಾನ್ಸ್‌ಜೆಂಡರ್ ಸದಸ್ಯೆಯಾಗಿ ಅವರು ಕಾರ್ಯನಿರ್ವಹಿಸಿದ್ದಾರೆ. ಸಾಂಪ್ರದಾಯಿಕ ತಂಜಾವೂರು ಶೈಲಿಯ ಪ್ರತಿಪಾದಕಿ, ಭರತನಾಟ್ಯ ಕಲಾವಿದೆ ನರ್ತಕಿ ನಟರಾಜ್ ಅವರೊಡನೆ 'ಮಯೂರ'ಕ್ಕಾಗಿ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.